**ಕರ್ನಾಟಕ ಸರ್ಕಾರ**
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**
ಆಯುಕ್ತರವರ ಕಛೇರಿ ಗ್ರಾ.ಕುನೀ.ಸ.ನೈ.ಇ., 2ನೇ ಮಹಡಿ, "ಇ" ಬ್ಲಾಕ್, ಕೆಹೆಚ್‌ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ. ರಸ್ತೆ,
ಬೆಂಗಳೂರು – 560 009. ☎ : 080–22240508 📠 : 22240509 ಈ–ಮೇಲ್: krwssa@gmail.com

ನಂ. ಗ್ರಾನೀಸ/20/ಗ್ರಾನೀಸ/2014 ದಿನಾಂಕ: 25-09-2014

## ಸುತ್ತೋಲೆ

**ವಿಷಯ: 2014–15ನೇ ಸಾಲಿನಲ್ಲಿ 2000 ನೀರು ಶುದ್ಧೀಕರಣ ಘಟಕ (WPP) ಗಳನ್ನು ಸರ್ಕಾರೇತರ/ ಸಂಘ/ಸಹಕಾರ ಸಂಸ್ಥೆಗಳ ಸಹಯೋಗದಲ್ಲಿ ಅಳವಡಿಸುವ ಕುರಿತು.**

**ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/86/ಗ್ರಾನೀಸ(5)2013, ದಿನಾಂಕ:24–05–2014**
**2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 20 ಗ್ರಾನೀಸ (8) 2014, ದಿನಾಂಕ:06–08–2014**
**3. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 20 ಗ್ರಾನೀಸ (8) 2014, ದಿನಾಂಕ:08–08–2014**

***

2014–15ನೇ ಸಾಲಿನಲ್ಲಿ 2000 ನೀರು ಶುದ್ಧೀಕರಣ ಘಟಕಗಳನ್ನು ಅನುಮೋದಿತ ಸಂಸ್ಥೆಗಳ ಮುಖೇನ ಅನುಮೋದಿತ ತಂತ್ರಜ್ಞಾನದ ನೀರು ಶುದ್ಧೀಕರಣ ಘಟಕ **(WPP)** ಗಳನ್ನು ಸ್ಥಳೀಯ ಜನಸಂಖ್ಯೆ ಮತ್ತು ವಾಸ್ತವಿಕ ಅಗತ್ಯತೆ ಹಿನ್ನೆಲೆಯಲ್ಲಿ ಸರ್ಕಾರೇತರ/ಸಂಘ/ಸಹಕಾರ ಸಂಸ್ಥೆಗಳ ಮುಖೇನ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಜವಾಬ್ದಾರಿಯೊಂದಿಗೆ ಅಳವಡಿಸುವ ಮೂಲಕ ಕಾರ್ಯಕ್ರಮವನ್ನು ಜಾಗ್ರತೆಯಾಗಿ ಅನುಷ್ಠಾನಗೊಳಿಸಬೇಕಿದೆ. ದಿನಾಂಕ:01–04–2014ರ YDU ಅಂಶಗಳನ್ನು ಆಧರಿಸಿ, ಯಾವುದೇ ಪರ್ಯಾಯ ಸುರಕ್ಷಿತ ಕುಡಿಯುವ ನೀರಿನ ಮತ್ತು ಜಲಮೂಲವಿಲ್ಲದಿರುವ, ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಮತ್ತು ಹಾನಿಕಾರಕ ಸೂಕ್ಷ್ಮಾಣು ಜೀವಿಗಳಿಂದ ನೀರಿನ ಗುಣಮಟ್ಟದ ಬಾಧೆಗೊಳಗಾಗಿರುವ ಜನವಸತಿಗಳ ಪಟ್ಟಿಯನ್ನು ದಿನಾಂಕ:30–07–2014ರೊಳಗೆ ಸರ್ಕಾರಕ್ಕೆ ಅನುಮೋದನೆಗಾಗಿ ನೀಡುವಂತೆ ಉಲ್ಲೇಖಿತ ಆದೇಶದಲ್ಲಿ ತಿಳಿಸಲಾಗಿದೆ. ಆದಾಗ್ಯೂ, ಯಾವುದೇ ಜಿಲ್ಲಾ ಪಂಚಾಯತಿಗಳಿಂದ ಪೂರ್ಣ ಪ್ರಮಾಣದ ಪ್ರಸ್ತಾವನೆಗಳು ಸ್ವೀಕೃತಿಯಾಗಿಲ್ಲ.

ದಿನಾಂಕ:01–04–2014ರ YDU ಆಧಾರದ ನಮೇಲೆ ಪರಿಶೀಲಿಸಿದಾಗ, ವಾಸ್ತವಿಕವಾಗಿ ಕೆಲವು ಜನವಸತಿಗಳಲ್ಲಿನ ಜಲಮೂಲಗಳು ರಾಸಾಯನಿಕವಾಗಿ ಕಲುಷಿತವಾಗಿದ್ದರೂ ಸಹ ಅಂತಹ ಜನವಸತಿಗಳನ್ನು ದಾಖಲಿಸದಿರುವುದನ್ನು ಗಮನಿಸಲಾಗಿದೆ. ಇದರಿಂದ, ಚುನಾಯಿತ ಜನ ಪ್ರತಿನಿಧಿಗಳು ಮತ್ತು ಸಾರ್ವಜನಿಕರಿಂದ ತೀವ್ರ ಟೀಕೆ ಟಿಪ್ಪಣಿಗಳು ಪ್ರತಿನಿತ್ಯ ವ್ಯಕ್ತವಾಗುತ್ತಿವೆ. ಈ ಬಗ್ಗೆ PRED ಇಂಜಿನಿಯರ್‌ಗಳನ್ನು ಪ್ರಶ್ನಿಸಿದಾಗ ಕೆಲವು ಜಲಮೂಲಗಳ ಪರೀಕ್ಷೆ ಮಾಡದಿರುವುದು/ಪರೀಕ್ಷಾ ವರದಿ ಇಂದೀಕರಿಸದಿರುವುದು/IMIS ನಲ್ಲಿ ದಾಖಲಿಸದಿದ್ದರೂ ಸಹ YDU Update ಮಾಡದಿರುವುದು ಕಂಡು ಬಂದಿದೆ.

ಮೇಲ್ಕಂಡ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ಬೇಡಿಕೆ ಸಲ್ಲಿಸಿರುವ ಪ್ರಕರಣಗಳಲ್ಲಿ ದಿನಾಂಕ: 01–04–2014 ರ YDU ಪ್ರಕಾರ ಕುಡಿಯುವ ನೀರಿನ ಪೂರೈಕೆ ಪ್ರಮಾಣ ಜೊತೆಗೆ ನೀರಿನ ಗುಣಮಟ್ಟದ ಸಮಸ್ಯೆ ಕುರಿತಂತೆ ಆಯಾ ಜನವಸತಿಗಳ ಜಲಮೂಲಗಳನ್ನು ಸಮರ್ಪಕವಾಗಿ NRDWP – WQMSP-Protocal ರನ್ವಯವೇ ಪರೀಕ್ಷೆ ಮಾಡಿಸಿ, ಸರಿಯಾದ ಮಾಹಿತಿಯನ್ನು ಪ್ರತಿಬಿಂಬಿಸಬೇಕು.

25/9/14

ಅಗತ್ಯವಿದ್ದಲ್ಲಿ ಸಂಶಯಾಸ್ಪದ ಹಾಗೂ ಪರೀಕ್ಷೆ ಮಾಡಿಸದಿರುವ ಜಲಮೂಲಗಳ ಕುಡಿಯುವ ನೀರಿನ ಗುಣಮಟ್ಟವನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಭೂ ವಿಜ್ಞಾನಿಗಳಿಂದ ಪರೀಕ್ಷೆ ಮಾಡಿಸಿದ ಮಾಹಿತಿಯನ್ನು ದೃಢೀಕರಿಸಬೇಕು. ಒಂದು ವೇಳೆ ಈಗಾಗಲೇ ಸದರಿ PRED / RWSSD ಇಂಜಿನಿಯರಿಂಗ್ ವಿಭಾಗದವರು ದಾಖಲಿಸಿದ ಮಾಹಿತಿ, ತಪ್ಪು ಮಾಹಿತಿ ಅಥವಾ ಅರ್ಥರಹಿತ ಮಾಹಿತಿಯೆಂದು ತಿಳಿದುಬಂದಲ್ಲಿ ಪುನರ್ ಸಮೀಕ್ಷೆಯಿಂದ ಪೂರ್ಣಗೊಳಿಸಿ ವಾಸ್ತವಿಕ ಮಾಹಿತಿ ದಾಖಲಿಸಲು ಆದೇಶಿಸಿದೆ. ಮಾಹಿತಿಯನ್ನು ಲಗತ್ತಿಸಿದ ನಮೂನೆಯಲ್ಲಿ ನೀಡುವುದು. ಉದ್ದೇಶಪೂರ್ವಕವಾಗಿ / ನಿರ್ಲಕ್ಷತನದಿಂದ ತಪ್ಪು ಮಾಹಿತಿ ದಾಖಲಿಸಿದಲ್ಲಿ / ನೀಡಿದಲ್ಲಿ ಅಂತಹ ಅಧಿಕಾರಿಗಳ ಮೇಲೆ KCSRನ ನಿಯಮಗಳನ್ವಯ CCA ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದೆ. ಇದು ಗ್ರಾಮೀಣ ಜನತೆಯ ಆರೋಗ್ಯದ ದೃಷ್ಟಿಯಿಂದ ಅತ್ಯಂತ ಗಂಭೀರವಾದ ವಿಷಯವಾಗಿದ್ದು, ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ಬೇಡಿಕೆ ಸಲ್ಲಿಸಿರುವ ಪ್ರಕರಣಗಳಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಜಲಮೂಲಗಳ ಗುಣಮಟ್ಟದ ವಿವರಗಳನ್ನು ದಿನಾಂಕ:25-10-2014ರ ಒಳಗೆ ಪರೀಕ್ಷೆಗೊಳಪಡಿಸಿ, ವಾಸ್ತವಾಂಶ ದಾಖಲಿಸಲು (update in YDU) ನಿರ್ದೇಶಿಸಿದೆ.

25/9/14

(ಮುನೀಶ್ ಮೌದ್ಗಿಲ್)
ಅಯುಕ್ತರು,
ಹಾಗೂ ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ,
ಕ.ಗ್ರಾ.ನೀ.ಸ.&ನೈರ್ಮಲ್ಯ ಇಲಾಖೆ

ಇವರಿಗೆ:

1) ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
2) ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು
3) ಮುಖ್ಯ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು & ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕಾವೇರಿ ಭವನ, ಬೆಂಗಳೂರು
4) ರಾಜ್ಯದ ಎಲ್ಲಾ (4) ಗ್ರಾಮೀಣ ನೀರು ಸರಬರಾಜು & ನೈರ್ಮಲ್ಯ ಇಲಾಖೆಯ ವೃತ್ತಗಳ ಅಧೀಕ್ಷಕ ಅಭಿಯಂತರರು
5) ರಾಜ್ಯದ ಎಲ್ಲಾ (30) ಗ್ರಾಮೀಣ ನೀರು ಸರಬರಾಜು & ನೈರ್ಮಲ್ಯ ಇಲಾಖೆಯ ವಿಭಾಗಗಲ ಕಾರ್ಯಪಾಲಕ ಅಭಿಯಂತರರು
6) ರಾಜ್ಯದ ಎಲ್ಲಾ (176) ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳೂ

ಪ್ರತಿಗಳನ್ನು:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿ (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಎಲ್ಲಾ ನಿರ್ದೇಶಕರುಗಳು, ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು / ಆಪ್ತ ಸಹಾಯಕರುಗಳು
5) ರಾಜ್ಯದ ಎಲ್ಲಾ (30) ಜಿಲ್ಲೆಗಳ ಜಿಲ್ಲಧಿಕಾರಿಗಳು
6) ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು